**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಜಗದೇವ ಗುತ್ತೇದಾರ ರವರು ಶೂನ್ಯ ವೇಳೆ ಪ್ರಸ್ತಾಪಕ್ಕೆ ಉತ್ತರ**

**ಪ್ರಶ್ನೆ:** ನಮ್ಮ ರಾಜ್ಯದಲ್ಲಿ ಪೋಕ್ಸೋ ಸುಳ್ಳು ಮೊಕದ್ದಮೆಗಳು ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವುದು ಕಂಡು ಬರುತ್ತಿದೆ. ಶಿಕ್ಷೆಯ ಪ್ರಮಾಣವೇ ಕುಸಿತಗೊಂಡಿದೆ ಕೇವಲ ಶೇ.5ರಷ್ಟು ಮಾತ್ರ ಶಿಕ್ಷೆಗೊಳಪಟ್ಟಿದ್ದಾರೆ. ಬಹುತೇಕ ಕೇಸ್‌ಗಳು ವಜಾಗೊಂಡಿವೆ ಅಥವಾ ಬಿಡುಗಡೆಯಾಗಿವೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಯುವುದಕ್ಕೆ ಪೋಕ್ಸೋ ಕಾಯಿದೆ ಜಾರಿಗೊಂಡಿದೆ. ಆದರೆ ಅದನ್ನು ವೈಯಕ್ತಿಕ ಸೇಡು ತೀರಿಸಿಕೊಳ್ಳಲು ಕೆಲವು ಪೋಷಕರು ಈ ಕಾಯಿದೆಯನ್ನು ಬಳಸಿಕೊಳ್ಳುತ್ತಿರುವುದು ಆಘಾತಕಾರಿಯಾದ ಸಂಗತಿ. ಇದರಿಂದ ಮಕ್ಕಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳುತ್ತಿಲ್ಲ. ಇದರ ಪರಿಣಾಮವಾಗಿ ಬಹಳಷ್ಟು ಕೇಸ್‌ಗಳು ಎಫ್. ಐ. ಆರ್ ದಾಖಲಿಸುವುದಕ್ಕೆ ಮುಂಚೆಯೇ ತಿರಸ್ಕೃತಗೊಳ್ಳುತ್ತಿವೆ. ಪೊಲೀಸ್ ತನಿಖೆಯ ವೇಳೆಗೆ ಬಹಳಷ್ಟು ಕೇಸ್‌ಗಳು ಫಾಲ್ಸ್ ಕೇಸ್‌ಗಳು ಎಂದು ಧೃಡಪಡುತ್ತಿವೆ. ಕೋರ್ಟಿನಲ್ಲಿ ವಿಚಾರಣೆ ನಡೆದಾಗ ಕೂಡ ಶೇ.50ರಷ್ಟು ಕೇಸ್‌ಗಳಲ್ಲಿ ಆರೋಪಿಗಳು ನಿರ್ದೋಷಿಯಾಗಿ ಬಿಡುಗಡೆಗೊಳ್ಳುತ್ತಿದ್ದಾರೆ.

ಹದಿಹರೆಯದವರು ಸಮ್ಮತಿ ಆಧಾರದಲ್ಲಿ ಸಂಬಂಧ ಹೊಂದಿದ್ದ ಸಂದರ್ಭಗಳಲ್ಲಿಯೂ ಪೋಕ್ಸೋ ದುರ್ಬಳಕೆ ಆಗುತ್ತಿದೆ ಎಂದು ಸ್ವತಃ ಕೋರ್ಟ್ ಹೇಳಿದೆ. ಆಸ್ತಿ ವಿವಾದ, ಕೌಟುಂಬಿಕ ಜಗಳಗಳು, ಬ್ಲಾಕ್‌ಮೇಲ್ ತಂತ್ರಗಳು, ಪೋಕ್ಸೋ ಕಾಯಿದೆಯಡಿಯಲ್ಲಿ ಸುಳ್ಳು ಪ್ರಕರಣಗಳನ್ನು ದಾಖಲಿಸಲು ಕಾರಣವಾಗುತ್ತಿವೆ. ಇದೊಂದು ಅಪಾಯಕಾರಿಯಾದ ಬೆಳವಣಿಗೆಯಾಗಿದೆ. ಆದ್ದರಿಂದ ಇದರ ಬಗ್ಗೆ, ಜನರಲ್ಲಿ ಜಾಗೃತಿ ಮೂಡಿಸುವ ಕೆಲಸಗಳು ಆಗಬೇಕಾಗಿದೆ. ಸರ್ಕಾರದ ಮುಂದೆ ಏನಾದರು ಯೋಜನೆ ಇರಬೇಕಲ್ಲ. ಇಲ್ಲದಿದ್ದರೆ ಅಮಾಯಕರು ಇದಕ್ಕೆ ಬಲಿಯಾಗುತ್ತಿದ್ದಾರೆ. ಅದರಿಂದ ಹೊರಗೆ ಬರುವವರೆಗೆ ಅವರ ಮನಃಸ್ಥಿತಿ ಏನಾಗುತ್ತದೆ? ಕೆಲವೊಂದು ಪ್ರಕರಣಗಳಲ್ಲಿ ಕೇಸ್ ಹಾಕಿದ ತಕ್ಷಣ ಹಿಂದೆ ಮುಂದೆ ನೋಡದೆ ಮರಣಕ್ಕೆ ಶರಣಾಗುತ್ತಿದ್ದಾರೆ. ಇನ್ನೊಂದು ಆಘಾತಕಾರಿ ಸಂಗತಿ ಎಂದರೆ ಆರ್ಥಿಕವಾಗಿ ಮುಂದುವರಿದ ಪ್ರದೇಶಗಳ ನಿವಾಸಿಗಳಿದ್ದ ಜಿಲ್ಲೆಗಳಲ್ಲಿಯೇ ಪೋಕ್ಸೋ ಸುಳ್ಳು ಕೇಸ್‌ಗಳ ಸಂಖ್ಯೆ ಹೆಚ್ಚುತ್ತಿದೆ. ನನ್ನ ಮಾಹಿತಿಯ ಪ್ರಕಾರ ಬೆಂಗಳೂರು, ಮೈಸೂರು, ಮಂಡ್ಯ ದಕ್ಷಿಣ ಕನ್ನಡ, ಚಿತ್ರದುರ್ಗ, ಶಿವಮೊಗ್ಗ, ಉಡುಪಿ, ಉತ್ತರ ಕನ್ನಡ, ಬೆಳಗಾವಿ ಜಿಲ್ಲೆಗಳು ಟಾಪ್‌ನಲ್ಲಿವೆ. ಚಿಕ್ಕಮಗಳೂರು, ಹಾವೇರಿ, ಮಂಡ್ಯ, ಕೋಲಾರ, ಶಿವಮೊಗ್ಗ, ತುಮಕೂರು, ವಿಜಯನಗರ ಜಿಲ್ಲೆಗಳಲ್ಲಿ ವಜಾಗೊಂಡಿರುವ ಕೇಸ್‌ಗಳ ಟಾಪ್‌ನಲ್ಲಿವೆ .

ಆದ್ದರಿಂದ ಸರ್ಕಾರ ಇದರ ಬಗ್ಗೆ, ಕೂಡಲೇ ಗಮನಹರಿಸಿ ಯೋಜನೆಯನ್ನು ರೂಪಿಸಬೇಕೆನ್ನುವ ವಿಚಾರದ ಬಗ್ಗೆ.

**ಉತ್ತರ:-** ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ಮತ್ತು ಅತ್ಯಾಚಾರದಂತಹ ಘೋರ ಪ್ರಕರಣಗಳನ್ನು ನಿಯಂತ್ರಿಸಲು, ತಡೆಗಟ್ಟಲು ಹಾಗೂ ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ಮತ್ತು ಅತ್ಯಾಚಾರ ವೆಸಗುವ ಆರೋಪಿಗಳನ್ನು ಕಾನೂನಿನ ಅಡಿಯಲ್ಲಿ ಕಠಿಣ ಶಿಕ್ಷೆಗೆ ಒಳಪಡಿಸುವ ಹಾಗೂ ಮಕ್ಕಳ ಮೇಲಿನ ಅಪರಾಧಗಳನ್ನು ತಡೆಟ್ಟುವ ಉದ್ದೇಶದಿಂದ ಸರ್ಕಾರವು ಪೋಕ್ಸೋ ಕಾಯ್ದೆಯನ್ನು ಜಾರಿಗೆ ತಂದಿರುತ್ತದೆ. ಈ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು ರಾಜ್ಯದ ಪೊಲೀಸ್ ಇಲಾಖೆಯ ಆದ್ಯ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರದಂತಹ ಘೋರ ಅಪರಾಧಗಳ ಕುರಿತಂತೆ ಪೊಲೀಸ್ ಠಾಣೆಗಳಲ್ಲಿ ದೂರುಗಳನ್ನು ಸಲ್ಲಿಸಿದಾಗ ಅಂತಹ ದೂರುಗಳನ್ನು ಪಡೆದು ಪರಿಶೀಲಿಸಿ, ನಿಯಮಾನುಸಾರ ಪ್ರಥಮಿಕ ವಿಚಾರಣೆ ನಡೆಸಿ, ಎಫ್.ಐ.ಆರ್. ಗಳನ್ನು

ಕಾನೂನು /ಕಾಯ್ದೆಯಲ್ಲಿನ ಕಲಂಗಳಡಿಯಲ್ಲಿ ದಾಖಲಿಸಿಕೊಂಡು, ತನಿಖೆಯನ್ನು ಕೈಗೊಳ್ಳಲಾಗುತ್ತಿದೆ. ತನಿಖೆಯ ಭಾಗವಾಗಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗುತ್ತದೆ. ಕೃತ್ಯಕ್ಕೆ ಬಂಧಿಸಿದಂತೆ, ನೊಂದವರನ್ನು ಹಾಗೂ ಆರೋಪಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ನಿಯಮಾನುಸಾರ ನೊಂದವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗುತ್ತದೆ. ಸಾಕ್ಷಿಗಳ ಹೇಳಿಕೆ, ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ತನಿಖೆಯನ್ನು ಕೈಗೊಳ್ಳಲಾಗುತ್ತದೆ. ತನಿಖೆ ಹಾಗೂ ಸಾಕ್ಷ್ಯಾಧಾರಗಳಿಂದ ಆರೋಪ ಸಾಭೀತಾಗದ ಪ್ರಕರಣಗಳಲ್ಲಿ ಸುಳ್ಳು ಪ್ರಕರಣವೆಂದು ಪರಿಗಣಿಸಿ, ನ್ಯಾಯಾಲಯಕ್ಕೆ 'ಬಿ' ವರದಿಯನ್ನು ಸಲ್ಲಿಸಲಾಗುತ್ತದೆ. ಆರೋಪ ಸಾಬೀತಾದ ಪ್ರಕರಣಗಳಲ್ಲಿ ಆರೋಪಿಗಳ ಮೇಲೆ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗುತ್ತದೆ. ದೋಷಾರೋಪಣಾ ಪಟ್ಟಿ ಸಲ್ಲಿಸಿದ ಪ್ರಕರಣಗಳಲ್ಲಿ ನ್ಯಾಯಾಲಯವು ಮುಂದಿನ ನಿರ್ಣಯ ಕೈಗೊಳ್ಳುತ್ತದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪೋಕ್ಸೋ ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳು, 'ಬಿ' ವರದಿ ಸಲ್ಲಿಸಿರುವ ಪ್ರಕರಣಗಳು, ಖುಲಾಸೆಯಾಗಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ.

**ಪೋಕ್ಸೋ ಪ್ರಕರಣಗಳು:**

| ವರ್ಷ | ವರದಿ | ಸುಳ್ಳು / ಬಿ - ವರದಿ | ನ್ಯಾಯಾಲಯದ ವಿಚಾರಣೆ | ಖುಲಾಸೆ |
|---|---|---|---|---|
| 2023 | 3903 | 56 | 1755 | 1666 |
| 2024 | 4078 | 65 | 2747 | 911 |
| 2025 (ನವೆಂಬರ್-15) | 3954 | 45 | 2813 | 135 |

ಮೇಲಿನ ಪೋಕ್ಸೋ ಪ್ರಕರಣಗಳ ಅಂಕಿ-ಅಂಶಗಳನ್ನು ಅವಲೋಕಿಸಲಾಗಿ, ವರದಿಯಾಗಿರುವ ಪ್ರಕರಣಗಳಲ್ಲಿ 2023ರಲ್ಲಿ ಶೇ 1.43 % 2024ರಲ್ಲಿ 1.59 % 2025ರಲ್ಲಿ 1.13 %, ಪ್ರಕರಣಗಳಲ್ಲಿ ಸುಳ್ಳು/ಬಿ- ವರದಿಯನ್ನು ಸಲ್ಲಿಸಲಾಗಿರುತ್ತದೆ.

ಪೋಕ್ಸೋ ಪ್ರಕರಣಗಳ ತನಿಖೆಯನ್ನು ತನಿಖಾಧಿಕಾರಿಗಳು ನಿಯಮಬದ್ಧವಾಗಿ, ಕಾನೂನು/ಕಾಯ್ದೆಯಲ್ಲಿನ ನಿಯಮಗಳನ್ನು ಪಾಲಿಸಿಕೊಂಡು ಸಮರ್ಪಕವಾಗಿ ನಿರ್ವಹಿಸಲು ಪೊಲೀಸ್ ಇಲಾಖೆಯಿಂದ ನಿಗಧಿತ ಕಾರ್ಯವಿಧಾನ (ಎಸ್. ಓ.ಪಿ)ಯನ್ನು ಸಿದ್ಧಪಡಿಸಿ ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.

**ರಾಜ್ಯದಲ್ಲಿ ಅಪ್ರಾಪ್ತರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ನಿಯಂತ್ರಿಸಲು/ ತಡೆಗಟ್ಟಲು ಕ್ರಮಗಳು:**

1. ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು/ ನಿಯಂತ್ರಿಸಲು/ ಆರೋಪಿತರನ್ನು ಕಠಿಣವಾಗಿ ಶಿಕ್ಷಿಸಲು ಪೋಕ್ಸೋ ಕಾಯ್ದೆಯನ್ನು ಜಾರಿಗೆ ತಂದಿರುತ್ತದೆ.
2. ಅತ್ಯಾಚಾರ ಪ್ರಕರಣಗಳಲ್ಲಿ ಸಾಕ್ಷಿನುಡಿಯಲು ಬರುವವರಿಗೆ ವಿಟ್ನೆಸ್ ಪ್ರೊಟೆಕ್ಷನ್ ಸ್ಕೀಮ್-2018 ಯೋಜನೆಯಡಿಯಲ್ಲಿ ಅಗತ್ಯ ರಕ್ಷಣೆಯನ್ನು ಒದಗಿಸಲಾಗುತ್ತಿದೆ.
3. ಸಾಕ್ಷಿದಾರರು ಪ್ರತಿಕೂಲ ಸಾಕ್ಷಿನುಡಿಯದಂತೆ ಎಚ್ಚರಿಕೆ ವಹಿಸಲಾಗುತ್ತಿದೆ.
4. ಅಪರಾಧ ಪ್ರಕರಣಗಳಲ್ಲಿ ಶಿಕ್ಷಾ ಪ್ರಮಾಣವನ್ನು ಹೆಚ್ಚಿಸಲು ರಾಜ್ಯ ಪೊಲೀಸ್ ಠಾಣಾಮಟ್ಟದಲ್ಲಿ. Court Monitoring cell ಅನ್ನು ರಚಿಸಲಾಗಿರುತ್ತದೆ.
5. ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 1485/2008ರ ಆದೇಶದಂತೆ ಅಪರಾಧ ಪ್ರಕರಣಗಳಲ್ಲಿ ಲೋಪವೆಸಗಿರುವ ಪೊಲೀಸ್ ಅಧಿಕಾರಿಗಳ ವಿರುದ್ಧ

ಶಿಸ್ತುಕ್ರಮ ಕೈಗೊಳ್ಳಲು ಮತ್ತು ಪ್ರಕರಣದ ಶಿಕ್ಷಾ ಪ್ರಮಾಣವನ್ನು ಹೆಚ್ಚಿಸಲು ರಾಜ್ಯದಲ್ಲಿ 3 ಹಂತದ ಅಕ್ವಿಟಲ್ ರಿವ್ಯೂ ಕಮಿಟಿಯನ್ನು ಕೆಳಕಂಡಂತೆ ರಚಿಸಲಾಗಿರುತ್ತದೆ:

- ರಾಜ್ಯ ಮಟ್ಟದ ಅಕ್ವಿಟಲ್ ರಿವ್ಯೂ ಕಮಿಟಿಯನ್ನು ಎ.ಡಿ.ಜಿ.ಪಿ.. ಅಪರಾಧ ಮತ್ತು ತಾಂತ್ರಿಕ ಸೇವೆಗಳು ರವರ ಅಧ್ಯಕ್ಷತೆಯಲ್ಲಿ.
- ವಲಯ/ ಕಮಿಷನರೇಟ್ ಮಟ್ಟದ ಅಕ್ವಿಟಲ್ ರಿವ್ಯೂ ಕಮಿಟಿಯನ್ನು ಪೊಲೀಸ್ ವಲಯಾಧಿಕಾರಿಗಳು ಮತ್ತು ಪೊಲೀಸ್ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ.
- ಜಿಲ್ಲಾ ಮಟ್ಟದ ಅಕ್ವಿಟಲ್ ರಿವ್ಯೂ ಕಮಿಟಿಯನ್ನು ಜಿಲ್ಲಾ ಪೊಲೀಸ್ ಅಧೀಕ್ಷರು ರವರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಲಾಗಿರುತ್ತದೆ.

6. ಸಮಿತಿಯು ನ್ಯಾಯಾಲಯಗಳಲ್ಲಿ ಖುಲಾಸೆಗೊಂಡ ಪ್ರಕರಣಗಳನ್ನು ಪರಾಮರ್ಶಿಸಿ/ ಅವಲೋಕಿಸಿ ಖುಲಾಸೆಗೆ ಕಾರಣಗಳೇನು ಮತ್ತು ಅಧಿಕಾರಿಗಳ ಲೋಪದೋಷಗಳಿಂದ ಖುಲಾಸೆಯಾಗಿದೆಯೇ ಅಥವಾ ಪ್ರತಿಕೂಲ ಸಾಕ್ಷಿಗಳಿಂದ ಖುಲಾಸೆ ಗೊಂಡಿದೆಯೇ ಎಂಬುದನ್ನು ವಿಮರ್ಶಿಸಿ ಲೋಪದೋಷಗಳ ಕಾರಣಗಳನ್ನು ಪಟ್ಟಿಮಾಡಿ ಮುಂದಿನ ಪ್ರಕರಣಗಳಲ್ಲಿ ಇಂತಹ ಲೋಪಗಳನ್ನು ಪುನರಾವರ್ತಿಸದಂತೆ ಘಟಕಾಧಿಕಾರಿಗಳಿಗೆ ಮತ್ತು ತರಬೇತಿ ಶಾಲೆಯಲ್ಲಿ ಪುನರ್ಮನನ ತರಬೇತಿಗಳಲ್ಲಿ ಅಗತ್ಯ ಸೂಚನೆಗಳನ್ನು ನೀಡಲಾಗುತ್ತಿದೆ.
7. ತನಿಖಾಧಿಕಾರಿಗಳ ಲೋಪದೋಷಗಳಿಂದ ಖುಲಾಸೆಯಾದ ಪ್ರಕರಣಗಳಲ್ಲಿ ತನಿಖಾಧಿಕಾರಿಗಳ ಮೇಲೆ ಅಗತ್ಯ ವಿಚಾರಣೆಗೆ ಆದೇಶಿಸಲಾಗುತ್ತಿದೆ.
8. ನ್ಯೂ ಕ್ರಿಮಿನಲ್ ಲಾ ಅಡಿಯಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು 60 ದಿನಗಳೊಳಗೆ ಪೂರ್ಣಗೊಳಿಸಿ, ಆರೋಪಿಗಳ ವಿರುದ್ಧ ದೋಷಾರೋಪಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲು ಕಾನೂನಿಗೆ ತಿದ್ದುಪಡಿ ತರಲಾಗಿರುತ್ತದೆ.
9. ಪೋಕ್ಸೋ ಪ್ರಕರಣದ ತನಿಖೆಯನ್ನು ಕ್ರಮ ಬದ್ಧವಾಗಿ ಹಾಗೂ ನಿಯಮಗಳನ್ನು ಅನುಸರಿಸಿ ತನಿಖೆಯನ್ನು ಸರ್ಮಪಕವಾಗಿ ನಿರ್ವಹಿಸಲು ತನಿಖಾಧಿಕಾರಿಗಳಿಗೆ ಮಾರ್ಗದರ್ಶನ ನೀಡುವ ಸಂಬಂಧ ಎಸ್‌ಒಪಿ ಯನ್ನು ಸಿದ್ಧಪಡಿಸಿ ಎಲ್ಲಾ ಘಟಕಾಧಿಕಾರಿಗಳಿಗೆ ಒದಗಿಸಲಾಗಿರುತ್ತದೆ.
10. ಮಕ್ಕಳ ಮೇಲಿನ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳ ಶೀಘ್ರವಾಗಿ ನ್ಯಾಯಾಲಯದ ವಿಚಾರಣೆಯನ್ನು ಪೂರ್ಣಗೊಳಿಸಲು ಪೋಕ್ಸೋ ಕಾಯ್ದೆ ಅಡಿಯಲ್ಲಿ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿರುತ್ತದೆ.
11. ಮಕ್ಕಳ ಹಕ್ಕುಗಳ ರಕ್ಷಣೆ ಆಯೋಗವು ಮಕ್ಕಳ ಹಕ್ಕುಗಳ ಕಾನೂನುಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ದೂರುಗಳನ್ನು ತನಿಖೆ ಮಾಡಲು NCPCR ಮತ್ತು SCPCR portalಗಳನ್ನು ಸ್ಥಾಪಿಸಿರುತ್ತದೆ.
12. ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಬಾಲ್ಯ ವಿವಾಹ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಲಾಗಿರುತ್ತದೆ.
13. ಮನೆ ಮನೆಗೆ ಪೊಲೀಸ್ ಕಾರ್ಯಕ್ರಮದಡಿ ಹಳ್ಳಿಗಳಲ್ಲಿ ಸಮೂಹ ಸದಸ್ಯರಿಗೆ ಜಾಗೃತಿ ಮೂಡಿಸಲಾಗಿರುತ್ತದೆ.
14. ಸರ್ಕಾರವು ಮಕ್ಕಳ ಅಪಹರಣ ಪ್ರಕರಣಗಳಲ್ಲಿ ಮಾನ್ಯ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ Horilal V/s Commissioner of Police, Delhi dated: 14/11/2022 ಇದರನ್ವಯ ಈ ಕಛೇರಿಯಿಂದ ನಿರ್ಧಿಷ್ಟ ಕಾರ್ಯವಿಧಾನ (ಎಸ್.ಒ.ಪಿ) ಸಂಖ್ಯೆ: ಸಿಆರ್ ಎಂ-2/224/03/2018 ಅನ್ನು ಹೊರಡಿಸಲಾಗಿದೆ.
15. ಮಹಿಳಾ ಮತ್ತು ಮಕ್ಕಳ ಸುರಕ್ಷತೆ ಮತ್ತು ಸಂರಕ್ಷಣೆಗಾಗಿ ರಾಜ್ಯದ ಎಲ್ಲಾ ಜಿಲ್ಲೆ ಮತ್ತು ನಗರ ಪ್ರದೇಶಗಳಲ್ಲಿ (ಬೆಂಗಳೂರು ನಗರ ಹೊರೆತುಪಡಿಸಿ) "ಅಕ್ಕ ಪಡೆ"ಯನ್ನು ರಚಿಸಲಾಗಿದೆ.

16. ಮಕ್ಕಳ ಸಹಾಯವಾಣಿ (1098) ಮತ್ತು 22943225 ಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ.
17. ಬೆಂಗಳೂರು ನಗರದಲ್ಲಿ Safe City Project ಯೋಜನೆ ಅಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಸುರಕ್ಷತೆ ಸಂಬಂಧವಾಗಿ 7500 ಸಿಸಿಟಿವಿ ಕ್ಯಾಮರಗಳನ್ನು ಅಳವಡಿಸಲಾಗಿದೆ.
18. ಜನ ಸಂದಣಿ ಸ್ಥಳಗಳಲ್ಲಿ ಮಕ್ಕಳ ಸುರಕ್ಷತೆಗಾಗಿ 50 ಸೇಫ್ಟಿ ಐಲ್ಯಾಂಡ್ (Safety Island) ಗಳನ್ನು ಗುರುತಿಸಿ ಮಹಿಳೆ ಮತ್ತು ಮಕ್ಕಳಿಗೆ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ.
19. ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಪೊಲೀಸ ಠಾಣೆಗಳಲ್ಲಿ 35 ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕಗಳನ್ನು (Anti-Human Trafficking Units) ಸ್ಥಾಪಿಸಿದ್ದು, ಮಕ್ಕಳ ಅಪಹರಣ ಪ್ರಕರಣಗಳನ್ನು ಸೂಕ್ಷವಾಗಿ ತನಿಖೆಕೈಗೊಳ್ಳಲಾಗುತ್ತಿದೆ.
20. ಕೇಂದ್ರ ಸರ್ಕಾರದ ಗೃಹ ಸಚಿವಾಲಯ ಸಹಯೋಗದೊಂದಿಗೆ CCPWC (Cyber Crime Prevention Against Women and Children) ಪೋರ್ಟಲ್ ಅಡಿಯಲ್ಲಿ ಆನ್-ಲೈನ್‌ನಲ್ಲಿ ದಾಖಲಾಗುವ ದೂರುಗಳನ್ನು ಸೆನ್ ಪೊಲೀಸ್ ಠಾಣೆಗಳಲ್ಲಿ ದಾಖಲಿಸಿ ಕ್ರಮ ವಹಿಸಲಾಗುತ್ತದೆ.

ಮಕ್ಕಳ ಮೇಲಿನ ಅಪರಾಧಗಳಲ್ಲಿ free and fair registration of FIR ಎಂಬುದು ನಮ್ಮ ರಾಜ್ಯದ ಪೊಲೀಸ್ ಇಲಾಖೆಯ ಘೋಷ ವಾಕ್ಯವಾಗಿದ್ದು, ಪೋಕ್ಸೋ ಪ್ರಕರಣಗಳಲ್ಲಿ ದೂರು ದಾಖಲಿಸಿ, ಕಾನೂನು ರೀತ್ಯಾ ತನಿಖೆಯನ್ನು ಕೈಗೊಂಡು, 60 ದಿನಗಳೊಳಗಾಗಿ ಆರೋಪಿಗಳ ವಿರುದ್ಧ ನ್ಯಾಯಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಮೂಲಕ ಪೊಲೀಸ್ ಇಲಾಖೆಯಿಂದ ಆರೋಪಿಗಳ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: ಹೆಚ್ ಡಿ 64 ಎಸ್‌ಡಿಎನ್ 2025**

**(ಡಾ: ಜಿ ಪರಮೇಶ್ವರ)**
**ಗೃಹ ಸಚಿವರು**